<u>ಬೆಂಗಳೂರು ಮಹಾನಗರ ಪಾಲಿಕೆ</u>

ಸಂಖ್ಯೆ: [illegible]/355/04-05

ಆಯುಕ್ತರವರ ಕಛೇರಿ,
ಮಹಾನಗರ ಪಾಲಿಕೆ ಕಛೇರಿಗಳು,
ಬೆಂಗಳೂರು, ದಿನಾಂಕ:23-2-2005.

<u>ಸುತ್ತೋಲೆ</u>

ವಿಷಯ: ವಾಣಿಜ್ಯ ಕಟ್ಟಡಗಳ ನೆಲಮಾಳಿಗೆ ಪ್ರದೇಶವನ್ನು ವಾಹನ ನಿಲ್ದಾಣಕ್ಕಾಗಿಯೇ ಮೀಸಲಿಡುವ ಬಗ್ಗೆ.

****

ವಾಹನ ನಿಲ್ದಾಣಕ್ಕೆಂದು ಮೀಸಲಿಟ್ಟಿದ್ದ ನೆಲಮಾಳಿಗೆ ಪ್ರದೇಶದಲ್ಲಿ ಹೋಟೆಲ್ ಉದ್ದಿಮೆ ನಡೆಸಲು ನೀಡಿರುವ ಪರವಾನಗಿಗಳನ್ನು 1999-2000 ರ ಸಾಲಿನಿಂದ ನವೀಕರಿಸಬಾರದೆಂದು; ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಹಾಗೂ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಗಳು ನಿರ್ಣಯಿಸಿರುತ್ತವೆ. 1999-2000 ರ ಸಾಲಿನಿಂದ ನೆಲಮಾಳಿಗೆ ಹೋಟೆಲ್‌ಗಳಿಗೆ ನೀಡಿದ್ದ ಪರವಾನಗಿಗಳನ್ನು ನವೀಕರಿಸದಿದ್ದ ಕ್ರಮವನ್ನು ಪ್ರಶ್ನಿಸಿ ಹೂಡಿದ್ದ ಡಬ್ಲ್ಯೂ.ಪಿ;10297/99 ಮತ್ತು ಇತರ ಮೊಕದ್ದಮೆಗಳು ದಿನಾಂಕ: 6-8-99 ರಂದು ಇತ್ಯರ್ಥವಾಗಿರುತ್ತವೆ. ನ್ಯಾಯಾಲಯದ ಸದರೀ ಆದೇಶವನ್ನು ಪ್ರಶ್ನಿಸಿ ವಿಭಾಗೀಯ ನ್ಯಾಯ ಪೀಠದ ಮುಂದೆ ಹೂಡಿದ್ದ ಡಬ್ಲ್ಯೂ.ಎ: 6063/99ರ ಮೇಲ್ಮನವಿಗಳು ದಿನಾಂಕ:20-1-2000 ರಂದು ವಜಾ ಆಗಿರುತ್ತವೆ.

<u>ನ್ಯಾಯಾಲಯದ ಪರಿಣಾಮಕಾರಿ ಆದೇಶದ ಭಾಗ ಈ ಕೆಳಕಂಡಂತೆ ಇರುತ್ತದೆ.</u>

(1) "It is declared that the places ear-marked for car parking in the plan sanctioned for the construction of a building cannot be permitted to be deviated for purposes other than car parking and no one is entitled to seek for grant or renewal of a trade licence to carry on any commercial activity in such place and the Authoritiesofthe Corporation are entitled to demolish the constructions, if any, made in contravention of the sanctioned plan, in accordance with law and after giving an apportunity to the parties who are likely to be affected an account of such demolition."

(2) "In respect of the building constructed subsequent to 27th April 1984 no one is entitledto seek for a Trade Licence to run hotel ect., if the establishment of such business venture would result in contravention of bye-law No:21 of the building bye-laws."

<u>ವಿಭಾಗೀಯ ನ್ಯಾಯಪೀಠವು ಅವಲೋಕಿಸಿರುವ ಅಂಶಗಳು ಈ ರೀತಿ ಇರುತ್ತವೆ.</u>

" Renewal of Licence has to be done on the same terms as if a fresh license is to be granted".

" Illegality commited in granting the Trade Licence cannot be permitted to be continued especially when it is against the interest of the public in general or which can bead to loss of human life or property in the case of fire or which can result in creating un-hygienic condition"

ವಾಹನ ನಿಲ್ದಾಣಕ್ಕೆಂದು ನಕ್ಷೆ ಮಂಜೂರಾಗಿರುವ ಪ್ರದೇಶವನ್ನು ವಾಹನ ನಿಲ್ದಾಣಕ್ಕಲ್ಲದೆ ಬೇರೆ ಯಾವುದಕ್ಕೂ ಉಪಯೋಗಿಸಬಾರದು-ಯಾವ ಉದ್ದೇಶಕ್ಕಾಗಿ ನಕ್ಷೆ ಮಂಜೂರಾಗಿದೆಯೋ ಆ ಉದ್ದೇಶಕ್ಕಲ್ಲದೆ ಬೇರೆ ಯಾವುದಕ್ಕೂ ಉಪಯೋಗಿಸಬಾರದು ಹಾಗೂ ದಿನಾಂಕ:27-4-1984ರ ನಂತರ ನಿರ್ಮಾಣವಾಗಿರುವ ಯಾವುದೇ ಕಟ್ಟಡದ ನೆಲಮಾಳಿಗೆಯಲ್ಲಿ ಹೋಟೆಲ್ ಉದ್ದಿಮೆ ನಡೆಸಲು ಪರವಾನಗಿ ನೀಡಬಾರದು ಎಂಬುದು ನ್ಯಾಯಾಲಯದ ಸ್ಪಷ್ಟ ಹಾಗೂ ನಿರ್ದಿಷ್ಟ ಆದೇಶ. ಅದರಂತೆ ಬೈಲಾ 21(ಸಿ) ಪ್ರಕಾರ ಹೋಟೆಲ್ ಉದ್ದಿಮೆಯನ್ನು ನಡೆಸಲು ನಿರ್ಬಂಧಿಸಲಾಗಿದೆ.

ಅಲ್ಲದೆ, ನಿಯಮಾವಳಿಗಳಿಗೆ ವ್ಯತಿರಿಕ್ತವಾಗಿ ನಿರ್ಮಿಸಿರುವ ಕಟ್ಟಡದ ಭಾಗವನ್ನು ಹೊಡೆದು ಹಾಕಲು ಕೆ.ಎಂ.ಸಿ. ಕಾಯ್ದೆ ಕಲಂ 321ರ ಅನ್ವಯ ಜರುಗಿಸುವ ಕ್ರಿಯೆಯು ಅಂತ್ಯಗೊಂಡಿದ್ದು; ಈ ಬಗ್ಗೆ ಕ್ರಮ ತೆಗೆದುಕೊಳ್ಳಲು ಯಾವುದೇ ನಿರ್ಬಂದವಿರುವುದಿಲ್ಲ.

ಆದುದರಿಂದ, ವಾಹನ ನಿಲ್ದಾಣಕ್ಕೆಂದು ಮೀಸಲಿಟ್ಟಿದ್ದ ಕಟ್ಟಡದ ನೆಲಮಾಳಿಗೆ ಪ್ರದೇಶವನ್ನು ಖಡಾಖಂಡಿತವಾಗಿ ವಾಹನ ನಿಲ್ದಾಣಕ್ಕಾಗಿಯೇ ಮೀಸಲಿಡಲು ನಿಯಂತ್ರಿಸಬೇಕೆಂದು ಸೂಚಿಸಿದೆ. ಹಾಗೂ 2005-06ರ ಸಾಲಿನಲ್ಲಿ ನೆಲಮಾಳಿಗೆ ಪ್ರದೇಶದಲ್ಲಿ ಹೋಟೆಲ್ ಉದ್ದಿಮೆ ನಡೆಸಲು ಪರವಾನಗಿ ನವೀಕರಿಸಬಾರದೆಂದು ನಿರ್ದೇಶಿಸಿದೆ. ಆದರೂ ಯಾವುದೇ ಕಾರಣದಿಂದ ನೆಲಮಾಳಿಗೆ ಪ್ರದೇಶಗಳಲ್ಲಿ ಪರವಾನಗಿ ನೀಡಿದ್ದೇ ಆದರೆ, ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಶಿಸ್ತಿನ ಕ್ರಮ ಜರುಗಿಸಲಾಗುವುದು. ನ್ಯಾಯಾಲಯಗಳ ಆದೇಶ/ಸರ್ಕಾರದ ಆದೇಶಗಳೇನೆ ಇದ್ದರು ಅಂತಹ ಪ್ರಕರಣಗಳನ್ನು ಅಪರ ಆಯುಕ್ತರು (ಹಣಕಾಸು) ರವರ ಮುಖಾಂತರ ಚರ್ಚಿಸಿ, ಇತ್ಯರ್ಥಪಡಿಸಲು ಆಯುಕ್ತರ ವಿವೇಚನೆಗೆ ಬಿಡುವುದು.

ಆಯುಕ್ತರು,
ಬೆಂಗಳೂರು ಮಹಾನಗರ ಪಾಲಿಕೆ.

ಪ್ರತಿಯನ್ನು:-
ಮುಖ್ಯ ಆರೋಗ್ಯಾಧಿಕಾರಿಯವರು/ವಲಯ ಆರೋಗ್ಯಾಧಿಕಾರಿಯವರು/
ಎಲ್ಲಾ ಉಪ ಆರೋಗ್ಯಾಧಿಕಾರಿಯವರಿಗೆ.
ಎಲ್ಲಾ ಆರೋಗ್ಯ ವೈದ್ಯಾಧಿಕಾರಿ, ಇವರುಗಳಿಗೆ ಕಳುಹಿಸುತ್ತಾ, ಈ ಸುತ್ತೋಲೆಯ ನಿರ್ದೇಶನವನ್ನು ಕಟ್ಟುನಿಟ್ಟಾಗಿ ಪಾಲಿಸಬೇಕೆಂದು ಸೂಚಿಸಿದೆ.